ಶ್ರೀ ಜಿ ಬಿ. ಶಂಕರ್ ರಾವ್.—ಸ್ವಾಮಿ, ಕಾವಂಗಾರಿ ಮಂತ್ರಿಗಳವರು ಒಂದು ಸಾರಿ ಹೇಳುವಾಗ ಈ ಮಾರ್ಕೆಟ್ ಕವಿಟಿಯಿಂದ ಸಂಗ್ರಹಿಸಿದ ಹಣವನ್ನು ಆಯಾಯಾ ತಾಲ್ಲೂಕ್‌ಗಳಿಗೆ ರಸ್ತೆ ನಿರ್ಮಾಣ ಮಾಡುವುದಕ್ಕೆ, ದುರಸ್ತಿ ಮಾಡಿಸುವುದಕ್ಕೆ ಕೊಡುತ್ತೇವೆಂದು ಹೇಳಿದ್ದರು. ಆ ವಿಚಾರ ವನ್ನೇನಾದರೂ ಕೈ ಬಿಟ್ಟಿದ್ದಾರೆಯೇ ಎಂದು ಕೇಳುತ್ತೇನೆ.

ಶ್ರೀ ಎ. ಬಿ. ಜಕನೂರ್.—ನಾವು ಅವರೂ ಕುಳಿತು ಚರ್ಚೆ ಮಾಡಿದ್ದೇವೆ. ಅದರ ಪ್ರಕಾರ ಆಯಾಯಾ ತಾಲ್ಲೂಕ್‌ಗಳಿಗೆ ರಸ್ತೆಗಳ ನಿರ್ಮಾಣ ಮತ್ತು ದುರಸ್ತಿಗಳಿಗೆ ಹಣವನ್ನು ಉಪಯೋಗಿಸ ಲಾಗುತ್ತಿದೆ.

Increased Power Supply to the B. C. Road Bus Stand, at Bantwal

467. SRI B. V. KAKKILAYA (Vittal).—Will the Minister of State for Information and Youth Services be pleased to state ;—

(*a*) whether the power supply connection to B. C. Road Bus Stand at Bantwal has been disconnected ;

(*b*) when was the quota of power supply to the said Bus Stand fixed and on what basis ;

(*c*) whether the Bantwal Town Municipality requested for enchancement of power supply to the Bus Stand in view of increased traffic ;

(*d*) how many new connections have been given in B. C. Road area to private parties after the Municipality applied for enhanced power supply to the Bus Stand ;

(*e*) what is the increased power supply made as a result of such connection ;

(*f*) what is the reason for refusing enhancement of power supply to the Bus Stand ?

SRI K. H SRINIVASA (Minister of State for Information and Youth Services).—

(*a*) Yes, it was disconnected on 10-5-1978 for non-payment of arrears and reconnected on 7-6-1978 on payment.—

(*b*) The quota of 49 units was fixed with effect from 13-10-1976. On the basis of connected load and consumption of similar installations it was refixed at 65 units with effect from 13-1-1978.

(*c*) Yes.

(*d*) 1. Commercial Lighting connection — 16 Nos.
2. Power connection — 1 No.
3. AEH connection — 2 Nos.

(*e*) Statement appended

(*f*) The quota has been increased from 49 units to 65 units.

STATEMENT

Showing Details of New Installations serviced after 20-9-1977 in B. C. Road area

Sl. No.	RRNo.	Load in Watts	Date of service	Quota fixed in units.
1B1 tariff				
1.	BM-636	360	28-9-1977	30
2.	BM-642	100	26-10-1977	30
3.	BM-643	200	28-10-1977	30
4.	BM-644	240	do	30
5.	BM-645	140	do	30
6.	BM-646	140	do	30
7.	BM-647	340	do	30
8.	BM-648	240	do	30
9.	BM-652	300	19-12-1977	30
10.	BM-654	380	24-12-1977	30
11.	BM-663	320	24-2-1978	30
12.	BM-664	220	28-2-1978	32
13.	BM-665	1000	14-3-1978	Quota yet to be fixed by SE Shimoga
14.	BM-666	500	22-3-1978	30
15.	BM-667	280	22-3-1978	30
16.	BM-675	1180	30-5-1978	Quota yet to be fixed by SE Shimoga.
Power connections				
1.	BMP-53	2 Hp.	13-5-1978	do
AEH connections				
1.	BM-377	1350	6-2-1978	do
2.	BM-661	1440	20-2-1978	do

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ (ಆ) ಉತ್ತರದಲ್ಲಿ ಆರಿಯರ್ಸ್ ಇದ್ದುರಿಂದ ಪವರ್ ಕಟ್ ಮಾಡಲಾಗಿತ್ತು ಎಂದು ಹೇಳಿದ್ದೀರಿ ಅದು ಸತ್ಯಕ್ಕೆ ದೂರವಾದ ಮಾತು, ಇದರ ಬಗ್ಗೆ ತಾವು ತಮ್ಮ ಅಧಿಕಾರಿಗಳನ್ನು ಸರಿಯಾಗಿ ವಿಚಾರಿಸಿದರೆ ಗೊತ್ತಾಗುತ್ತದೆ. ಏತಕ್ಕೆಂದರೆ ಬಸ್ ಸ್ಟಾಂಡಿನಲ್ಲಿ ತಾವು ಏನು ಲೈಟ್ ಒದಗಿಸಿಕೊಡುತ್ತೀರಿ ಅದಕ್ಕೆ ಕೂಡ ಬೇಕಾದ ಹಣವನ್ನು ಕೊಡುವುದಕ್ಕೆ ತಹಶೀಲ್ದಾರ್ ರವರಿಗೇ ಪವರ್ ಇದೆ ಅವರು ಕೊಡುತ್ತಾರೆ, ಆದರೆ ಅಲ್ಲಿ ಏನಾಗಿದೆ ಎಂದರೆ ನಿಗದಿಯಾದುದಕ್ಕಿಂತ

ಹೆಚ್ಚಿಗೆ ಕರೆಂಟ್‌ನ್ನು ಉಪಯೋಗ ಮಾಡಿದುದರಿಂದ ಪವರ್ ಕಟ ಮಾಡಲಾಗಿತ್ತು. ಆದುದರಿಂದ ಇದರ ಬಗ್ಗೆ ತಾವು ವಿಚಾರಣೆ ಮಾಡಿ ಮುಂದೆ ಸಾರ್ವಜನಿಕರಿಗೆ ತೊಂದರೆಯಾಗದ ರೀತಿಯಲ್ಲಿ ವ್ಯವಸ್ಥೆ ಮಾಡಿ. ಉದ್ದೇಶ ಪೂರ್ವಕವಾಗಿ ಆ ರೀತಿ ಅಧಿಕಾರಿಗಳು ಮಾಡಿದ್ದಾರೆ ಅದರ ಬಗ್ಗೆ ವಿಚಾರಣೆ ನಡೆಸುತ್ತೀರಾ?

† ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ನನ್ನ ಹತ್ತಿರ ಇರುವ ವರದಿಯ ಪ್ರಕಾರ ನಾನ್‌ಪೇಮೆಂಟ್ ಆಫ್ ಅರಿಯರ್ಸ್‌ನಿಂದಾಗಿ ಎಲೆಕ್ಟ್ರಿಕ್ ಡಿಸ್‌ಕನೆಕ್ಟ್ ಮಾಡಿದ್ದಾರೆ ಎಂದು ಇದೆ. ಹಾಗಲ್ಲದೇ ಈ ಬಗ್ಗೆ ಉದ್ದೇಶ ಪೂರ್ವಕವಾಗಿ ಇದನ್ನು ಡಿಸ್‌ಕನೆಕ್ಟ್ ಮಾಡಿದ್ದಾರೆ ಎಂದು ತಾವು ಅಭಿಪ್ರಾಯ ಪಡುವುದಾದರೆ ನಾನು ಆ ಬಗ್ಗೆ ಎನ್‌ಕ್ವೈರಿ ಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಬಂಟವಾಳದ ಬಿ.ಸಿ. ರಸ್ತೆಯ ಬಸ್ಸು ನಿಲ್ದಾಣಕ್ಕೆ ೧೯೭೬ನೇ ಇಸವಿಯಲ್ಲಿ ೪೯ ಯೂನಿಟ್‌ಗಳ ವಿದ್ಯುಚ್ಛಕ್ತಿಯನ್ನು ಫಿಕ್ಸ್ ಮಾಡಿದ್ದರು. ಆಗ ರಾತ್ರಿ ವೇಳೆ ಬಸ್‌ಗಳು ಓಡಾಡುತ್ತಿರಲಿಲ್ಲ. ಈಗ ಏನಾಗಿದೆ ಎಂದರೆ ಬಿ.ಸಿ. ರಸ್ತೆಯ ಬಸ್ ಸ್ಟ್ಯಾಂಡ್‌ನ ಮೂಲಕ ೧೬ ನೈಟ್ ಬಸ್‌ಗಳು ಬೆಂಗಳೂರಿಗೆ ಬರುತ್ತವೆ; ಮತ್ತು ಇಲ್ಲಿಂದ ಬೇರೆ ಕಡೆಗೆ ಹೋಗುತ್ತವೆ. ಈ ಬಸ್ ಸ್ಟ್ಯಾಂಡ್‌ನಲ್ಲಿ ಬೆಳಿಗ್ಗೆ ೫ ಗಂಟೆ ತನಕ ಟ್ರಾಫಿಕ್ ಇರುತ್ತದೆ. ಇಂತಹ ಬಸ್ ಸ್ಟ್ಯಾಂಡ್‌ನಲ್ಲಿ ೪೯ ಯೂನಿಟುಗಳನ್ನು ಏನು ಕೊಟ್ಟಿದ್ದಾರೆ ಅದು ಸಾಲುವುದಿಲ್ಲ, ಅದನ್ನು ಹೆಚ್ಚು ಮಾಡಬೇಕೆಂದು ತಾವು ಆದೇಶ ಕೊಟ್ಟ ಮೇಲೆ ಅದನ್ನು ೬೫ ಯೂನಿಟ್‌ಗಳಿಗೆ ಫಿಕ್ಸ್ ಮಾಡಿದ್ದಾರೆ. ಈಗ ಅದು ಸಾಕಾಗುವುದಿಲ್ಲ. ಇದನ್ನು ತಾವು ಪರಿಶೀಲನೆ ಮಾಡಬೇಕು. ಈ ಬಸ್ ಸ್ಟ್ಯಾಂಡ್‌ಗೆ ಇನ್ನೂ ಹೆಚ್ಚು ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಹೆಚ್ಚಾಗಿ ಎಷ್ಟು ವಿದ್ಯುಚ್ಛಕ್ತಿ ಬೇಕು ಎನ್ನುವುದರ ಬಗ್ಗೆ ತಾವು ಅವರಿಂದ ತಿಳಿದು ನನಗೆ ವಿಚಾರ ಹೇಳಿದರೆ ಆಷ್ಟು ರೀಸನೇಬಲ್ ಯೂನಿಟ್ಸ್ ವಿದ್ಯುಚ್ಛಕ್ತಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಆ ಬಸ್ ಸ್ಟ್ಯಾಂಡಿಗೆ ಪವರ್ ಕಟ್ ಮಾಡಿ ಕೊಟ್ಟಿರತಕ್ಕಂಥ ವಿದ್ಯುಚ್ಛಕ್ತಿ ಕಡಿಮೆಯಿದೆಯೆಂದು ಹೇಳಿದ್ದರೂ ಕೂಡ ಸೂಪರಿಂಟೆಂಡೆಂಟ್ ಇಂಜಿನಿಯರ್ ಇನ್ನೂ ಕೂಡ ಹೆಚ್ಚಿನ ಕೋಟಾವನ್ನು ನಿಗದಿ ಮಾಡಿಲ್ಲ. ಅಲ್ಲಿಯ ಶ್ರೀಮಂತ ವರ್ತಕರನೇಕರಿಗೆ ೧೦೦೦ ಯೂನಿಟ್‌ಗಳಿಂದ ೧೪೦೦ ಯೂನಿಟ್‌ಗಳವರೆಗೆ ಕೊಟ್ಟಿದ್ದಾರೆ. ಅವರಿಗೆ ಆಷ್ಟು ಕೊಡಬಾರದು ಎಂದು ನಾನು ಹೇಳುವುದಿಲ್ಲ. ಆದರೆ ಸಾವಿರಾರು ಯೂನಿಟ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ಖರ್ಚು ಮಾಡುವವರಿಗೆ ಯಾವ ವಿಧವಾದ ಖೋತಾ ನಿಗದಿ ಮಾಡದೇ ವಿದ್ಯುಚ್ಛಕ್ತಿಯನ್ನು ಅವರಿಗೆ ಕೊಟ್ಟಿದ್ದಾರೆ. ನಮ್ಮ ಬಸ್ ಸ್ಟ್ಯಾಂಡಿಗೆ ಮಾತ್ರ ಪವರ್ ಕಟ್ ಮಾಡಿ ವಿದ್ಯುಚ್ಛಕ್ತಿಯನ್ನು ಕೊಟ್ಟಿದಾರೆ. ಈ ತರಹ ಇನ್ನು ಮುಂದೆ ಆಗದ ಹಾಗೆ ಅವರಿಗೆ ಎಚ್ಚರಿಕೆ ಕೊಡುತ್ತೀರಾ ಸ್ವಾಮಿ?

ಶ್ರೀ ಕೆ. ಹೆಚ್. ಶ್ರೀನಿವಾಸ.—ಮಾನ್ಯ ಆಧ್ಯಕ್ಷರೇ, ಈ ಪವರ್ ಕಟ್ ಮಾಡುವಾಗ ಯಾರ್ಯಾರು ಎಷ್ಟೆಷ್ಟು ವಿದ್ಯುಚ್ಛಕ್ತಿಯನ್ನು ಬಳಕೆ ಮಾಡುತ್ತಾರೆ ಎಂಬುದನ್ನು ತಿಳಿದುಕೊಂಡು, ಅಂತಹವರಿಗೆ ಇಷ್ಟು ಪರ್ಸೆಂಟೇಜ್ ವಿದ್ಯುಚ್ಛಕ್ತಿ ಖೋತಾ ಮಾಡಬೇಕು ಎಂದು ಹೇಳಿ ಅವರು ಖೋತಾ ಮಾಡುತ್ತಾರೆ. ಬಸ್ ಸ್ಟ್ಯಾಂಡಿಗೆ ಸಾಧಾರಣವಾಗಿ ಎಷ್ಟು ವಿದ್ಯುಚ್ಛಕ್ತಿ ಬಳಕೆ ಆಗುತ್ತಿತ್ತು ಎಂಬುದನದ್ನು ತಿಳಿದುಕೊಂಡು ಇಂತಿಷ್ಟು ಕಡಿಮೆ ವಿದ್ಯುಚ್ಛಕ್ತಿ ಬಳಕೆ ಮಾಡಬೇಕೆಂಬುದಾಗಿ ಅವರು ಸೂಚನೆ ಕೊಟ್ಟಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಸ್ವಾಮಿ, ಹಿಂದೆ ರಾತ್ರಿಯೆಲ್ಲಾ ಹೆಚ್ಚು ಬಸ್‌ಗಳು ಅಲ್ಲಿ ಓಡಾಡುತ್ತಿರಲಿಲ್ಲ. ಇದರಿಂದ ಹೆಚ್ಚು ವಿದ್ಯುಚ್ಛಕ್ತಿಯನ್ನು ಬಳಕೆ ಮಾಡುತ್ತಿರಲಿಲ್ಲ. ಈಗ ಆ ಬಸ್ ಸ್ಟ್ಯಾಂಡಿನಲ್ಲಿ ರಾತ್ರಿಯೆಲ್ಲಾ ಹೆಚ್ಚು ಬಸ್‌ಗಳು ಓಡಾಡುತ್ತಿರುತ್ತವೆ. ಆದ್ದರಿಂದ ಹೆಚ್ಚು ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡುವುದಕ್ಕೆ ತಾವು ಪ್ರಯತ್ನ ಮಾಡುತ್ತೀರಾ?

ಶ್ರೀ ಕೆ. ಎಚ್. ಶ್ರೀನಿವಾಸ್.—ತಾವು ಹೇಳುವುದು ಸರಿಯಾಗಿದೆ. ಹಿಂದೆ ರಾತ್ರಿ ಕಾಲದಲ್ಲಿ ಅಲ್ಲಿ ಹೆಚ್ಚು ಬಸ್‌ಗಳು ಬರುತ್ತಾ ಇರಲಿಲ್ಲ; ಹೆಚ್ಚು ವಿದ್ಯುಚ್ಛಕ್ತಿ ಬಳಕೆಯಾಗುತ್ತಿರಲಿಲ್ಲ ಎಂದು ತಾವು ಹೇಳುತ್ತಿದ್ದೀರಿ. ಇದರಿಂದ ಅಲ್ಲಿ ಕಡಿಮೆ ಯೂನಿಟ್‌ಗಳನ್ನು ನಿಗದಿ ಮಾಡಿದ್ದರು. ಆಮೇಲೆ ತಾವು ಮತ್ತು ಪುರಸಭೆಯವರು 'ಅಲ್ಲಿ ಹೆಚ್ಚು ಬಸ್‌ಗಳು ರಾತ್ರಿಯೆಲ್ಲಾ ಓಡಾಡುತ್ತಿವೆ, ಅಲ್ಲಿ ಹೆಚ್ಚು ವಿದ್ಯುಚ್ಛಕ್ತಿಯ ಅಗತ್ಯವಿದೆ' ಎಂದು ಕೇಳಿಕೊಂಡ ಪ್ರಕಾರ ಈಗ ೬೫ ಯೂನಿಟ್‌ಗಳನ್ನು ಕೊಟ್ಟಿದ್ದಾರೆ.

ಈಗ ಇನ್ನೂ ಹೆಚು ಯೂನಿಟ್‌ಗಳು ಬೇಕು ಎಂದು ತಾವು ಕೇಳುತ್ತಿದ್ದೀರಿ. ಈ ಬಗ್ಗೆ ಇನ್ನು ಎಷ್ಟು ಜಾಸ್ತಿ ಯೂನಿಟ್‌ಗಳು ಬೇಕು ಎಂಬುದನ್ನು ನಮ್ಮ ಗಮನಕ್ಕೆ ತಂದರೆ ಸಾರ್ವಜನಿಕರ ಅನುಕೂಲದ ದೃಷ್ಟಿಯಿಂದ ನಾನು ಅದನ್ನು ನಿಗದಿ ಮಾಡಿಸಿಕೊಡುತ್ತೇನೆ.

Construction of three bridges in Tumkur District

669. SRI D. T. MAYANNA (Huliyurdurga).—Will the Minister for Public Works be pleased to state.—

(*a*) whether the Government intend to take up the following bridge works expiditiously in Tumkur District;

(1) bridge work at Bangalore, Magadi, Huliyurdurga Road near Hangarahalli in Huliyurdurga hobli, Kunigal taluk of Tumkur District;

(2) bridge work at Chowdanakuppe Tavarekere Road near Chowdanakuppe;

(3) a bridge to the waste-weir of K. Hannamachanahalli Tank at Huliyurdurga-Kandle Road near Pura;

(*b*) how many years ago the estimates for the construction of above bridges were prepared ?

SRI S. BANGARAPPA (Minister for Public Works).—

(*a*) It is under consideration.

(*b*) About 2 years back.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ, ತುಮಕೂರು ಜಿಲ್ಲೆಯಲ್ಲಿ ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಹೋಬಳಿಯ ಹಂಗರಹಳ್ಳಿಯಲ್ಲಿರುವ ರಸ್ತೆ ಬಹಳ ಮುಖ್ಯವಾದುದು. ಬೆಂಗಳೂರಿನಿಂದ ಮೈಸೂರು ಮಂಡ್ಯಕ್ಕೆ ಹೋಗತಕ್ಕಂಥ ಬಸ್‌ಗಳಲ್ಲಿ ಅರ್ಧ ಗಂಟೆಗೆ ಒಂದೊಂದು ಬಸ್‌ಗಳು ಇಲ್ಲಿ ಹಾದು ಹೋಗುತ್ತವೆ. ಈ ರಸ್ತೆಯಲ್ಲಿ ೧೦ ಮೈಲಿ ದೂರದವರೆಗೆ ಟಾರ್ ಹಾಕಿಲ್ಲ. ಮಳೆಗಾಲದಲ್ಲಿ ರಸ್ತೆ ತುಂಬಾ ನೀರು ಬಂದು ಬಸ್ ಮುಂದಕ್ಕೆ ಹೋಗುವುದಕ್ಕೆ ಅವಕಾಶವಾಗದೆ ಒಂದೆರಡು ದಿನ ಇಲ್ಲಿ ನಿಂತು ಬಿಡುತ್ತವೆ; ಆದ್ದರಿಂದ ಇಲ್ಲಿ ರಸ್ತೆಗೆ ಟಾರ್ ಹಾಕುವ ಕೆಲಸ ಆಗಬೇಕಾಗಿದೆ. ಎರಡನೆಯದಾಗಿ ಕುಣಿಗಲ್‌ನಿಂದ ಚನ್ನಪಟ್ಟಣಕ್ಕೆ ಹೋಗುವಲ್ಲಿ ಒಂದು ಮುಖ್ಯವಾದ ರಸ್ತೆ ಇದೆ. ಮತ್ತೆ ಹುಲಿಯೂರುದುರ್ಗದಿಂದ ಮಂಡ್ಯಕ್ಕೆ ಹೋಗಲು ಒಂದು ಹತ್ತಿರದ ರಸ್ತೆ ಇದೆ. ಈ ಎಲ್ಲಾ ರಸ್ತೆ ಕಾರ್ಯಗಳನ್ನು ಯಾವಾಗ ಮಾಡಿಸಿಕೊಡುತ್ತೀರಿ?

† ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಇದು ಪ್ರಾಮುಖ್ಯವಾದಂಥ ವಿಷಯ ; ಇದು ಸರ್ಕಾರ ದವರ ಗಮನದಲ್ಲಿದೆ. ಅದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ನಮ್ಮಲ್ಲಿ ಹಣಕಾಸಿನ ಶಕ್ತಿಯ ಆಧಾರದ ಮೇಲೆ ಈ ಎಲ್ಲಾ ಕೆಲಸಗಳನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ. ಆದ್ದರಿಂದ ಈ ಮೂರರಲ್ಲಿ ಯಾವುದನ್ನು ಪ್ರಾಮುಖ್ಯವಾಗಿ ತೆಗೆದುಕೊಳ್ಳಬೇಕಾಗಿದೆಯೋ ಅದನ್ನು ನಾವು ಆದಷ್ಟು ಬೇಗ ತೆಗೆದುಕೊಳ್ಳುತ್ತೇವೆ.

ಶ್ರೀ ಡಿ. ಟಿ. ಮಾಯಣ್ಣ.—ಸ್ವಾಮಿ. ಈ ತುಮಕೂರು ಜಿಲ್ಲೆಯಲ್ಲಿನ ಸೇತುವೆ ನಿರ್ಮಾಣ ಕಾರ್ಯವನ್ನು ಬಜೆಟ್‌ನಲ್ಲಿ ಇನ್‌ಕ್ಲೂಡ್ ಮಾಡಬೇಕೆಂದು ಹೇಳಿದ್ದರು. ಈಗ ಅದನ್ನು ಬಜೆಟ್‌ನಲ್ಲಿ ಇನ್‌ಕ್ಲೂಡ್ ಮಾಡದೇ, ಆದನ್ನು ತೆಗೆದುಕೊಳ್ಳದೇ ನಿಧಾನ ಮಾಡುತ್ತಿದ್ದಾರೆ. ಇದನ್ನು ಆದಷ್ಟು ಬೇಗ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ?